**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಲಯ , ಶ್ರೀರಂಗಪಟ್ಟಣ**

DW-1

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ ಃ **18.05.2026**

ಪಾಟೀ ಸವಾಲುಃ ಫಿರ್ಯಾದಿ ಪರ ಶ್ರೀ ಬಿ ಟಿ ಡಿ ವಕೀಲರಿಂದಃ

1. ನಾನು ಈ ಹಿಂದೆ ಕಾಫಿ ಪುಡಿ ವ್ಯಾಪಾರವನ್ನು ಮಾಡುತ್ತಿದ್ದೇನು. ಈಗ ಯಾವುದೇ ಕೆಲಸ ಮಾಡುತ್ತಿಲ್ಲ. ನಾನು ಈಗೆ 5 ವರ್ಷಗಳಿಂದ ಬೆಳವಾಡಿ ಗ್ರಾಮದಲ್ಲಿ ವಾಸವಾಗಿರುತ್ತೇನೆ. ನನ್ನ ಗಂಡ ಅಡುಗೆ ಮಾಡುವ ಕೆಲಸವನ್ನು ಮಾಡುತ್ತಾರೆ.

2. ನಿಪಿ-1 ಚೆಕ್ ನನ್ನ ಖಾತೆಗೆ ಸಂಬಂಧಿಸಿರುತ್ತದೆ. ನಿಪಿ-1 ಚೆಕ್ ನಲ್ಲಿರುವ ಸಹಿ ನನ್ನದೆ ಆಗಿರುತ್ತದೆ. ಸದರಿ ಸಹಿ ಈಗಾಗಲೇ ನಿಪಿ-1(ಎ) ಎಂದು ಗುರುತಿಸಲಾಗಿರುತ್ತದೆ.

3. ದಿಃ 10.08.2020 ಗಿಂತ ಮೊದಲು ನಿಪಿ-1 ಚೆಕ್ ಕಳೆದು ಹೋದ ಬಗ್ಗೆ ನಾನು ಯಾವುದೇ ಪೋಲಿಸ್ ಠಾಣೆಯಲ್ಲಿ ದೂರನ್ನು ನೀಡಿಲ್ಲ ಮತ್ತು ಸದರಿ ನಿಪಿ-1 ಚೆಕ್ ಕಳೆದು ಹೋದ ಬಗ್ಗೆ ಯಾವುದೇ ಪತ್ರಿಕೆಯಲ್ಲಿ ಪ್ರಕಟಣೆಯನ್ನು ನೀಡಿಲ್ಲ.

4. ಸದರಿ ನಿಪಿ-1 ಚೆಕ್ ನ್ನು ದೂರಪಯೋಗ ಪಡಿಸಿಕೊಂಡವರ ಬಗ್ಗೆ ನನ್ನ ವಕೀಲರ ಮೂಲಕ ಯಾವುದೇ ನೋಟಿಸನ್ನು ನೀಡಿರುವುದಿಲ್ಲ.

5. ನಿಪಿ-1 ಚೆಕ್ ನ್ನು ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ಸದರಿ ಚೆಕ್ ನ್ನು ನಗದೀಕರಣ ಮಾಡದೇ stop payment ಮಾಡುವಂತೆ ನನ್ನ ಬ್ಯಾಂಕಿಗೆ ನಾನು ಯಾವುದೇ ಮನವಿಯನ್ನು ಸಲ್ಲಿಸಿಲ್ಲ.

6. ನನ್ನ ಮೊಬೈಲ್ ಗೆ ನನ್ನ ಖಾತೆಯಿಂದ ಹಣವನ್ನು ಜಮೆ ಮಾಡಿದಾಗ ಮತ್ತು ಹಿಂಪಡೆದಾಗ ಮೆಸೇಜ್ ಬರುತ್ತದೆ ಎಂದರ ಸರಿ.

7. ನನ್ನ ಮೊಬೈಲ್ ಗೆ ನನ್ನ ಖಾತೆಗೆ ಡಿಡಿ ಅಥವಾ ಚೆಕ್ ನ್ನು ನಗದೀಕರಣಕ್ಕಾಗಿ ಹಾಜರು ಪಡಿಸಿದಾಗ ಮೆಸೇಜ್ ಬರುತ್ತದೆ ಎಂದರ ಸರಿ.

8. ನಿಪಿ-1 ಚೆಕ್ ನ್ನು ಬ್ಯಾಂಕಿಗೆ ನಗದೀಕಾರಣಕ್ಕಾಗಿ ಹಾಜರುಪಡಿಸಿದಾಗ ನನ್ನ ಮೊಬೈಲ್ ಗೆ ನನ್ನ ಖಾತೆಯಿಂದ ಯಾವುದೇ ಮೆಸೇಜ್ ಬಂದಿರುವುದಿಲ್ಲ.

9. ನಿಪಿ-1 ಚೆಕ್ ಗೆ ಸಂಬಂಧಿಸಿದಂತೆ ಬ್ಯಾಂಕಿನ ಪಾಸ್ ಬುಕ್ ಇರುತ್ತದೆ ಎಂದರೆ ಸರಿ. ಸದರಿ ಪಾಸ್ ಬುಕ್ ನಲ್ಲಿ ಚೆಕ್ ಅಥವಾ ಡಿಡಿ ಅನ್ನು ನಗದೀಕಾರಣಕ್ಕಾಗಿ ಹಾಜರುಪಡಿಸಿದಾಗ ಆ ಬಗ್ಗೆ ನಮೂದಾಗುತ್ತದೆ ಎಂದರೆ ಸರಿ.

10. ನಿಪಿ-1 ಚೆಕ್ ಗೆ ಸಂಬಂಧಿಸಿದಂತೆ ನನ್ನ ಪಾಸ್ ಬುಕ್ ನಲ್ಲಿ ನಮೂದು ಆದ ಬಗ್ಗೆ ನನ್ನ ಬ್ಯಾಂಕಿನ ಮ್ಯಾನೇಜರ್ ಗೆ ಯಾವುದೇ ಮನವಿಯನ್ನು ಸಲ್ಲಿಸಿರುವುದಿಲ್ಲ.

11. ನಿಪಿ-1 ಚೆಕ್ ಗೆ ಸಂಬಂಧಿಸಿದಂತೆ ನಾನು ಯಾವುದೇ ಪೋಲಿಸ್ ಠಾಣೆಗೆ ಮತ್ತು ನನ್ನ ಬ್ಯಾಂಕಿಗೆ ದೂರನ್ನು ಸಲ್ಲಿಸಿರುವುದಿಲ್ಲ.

12. ನಿಪಿ-1 ಚೆಕ್ ಗೆ ಸಂಬಂಧಿಸಿದಂತೆ ಸದರಿ ಚೆಕ್ ದುರುಪಯೋಗವಾದ ಬಗ್ಗೆ ನಾನು ನನ್ನ ವಕೀಲರ ಮೂಲಕ ಯಾವುದೇ ನೋಟಿಸನ್ನು ನೀಡಿರುವುದಿಲ್ಲ.

13. ನಾನು ಫಿರ್ಯಾದಿ ಯಿಂದ 3 ಲಕ್ಷ ಹಣವನ್ನು ಪಡೆದಿದ್ದರಿಂದ ನಾನು ಫಿರ್ಯಾದಿಯ ವಿರುದ್ಧ ನಿಪಿ-1 ಚೆಕ್ ಗೆ ಸಂಬಂಧಿಸಿದಂತೆ ಯಾವುದೇ ದೂರನ್ನು ನೀಡಿರುವುದಿಲ್ಲ. ಸಾಕ್ಷಿ ಮುಂದುವರೆದು ಸದರಿ ನಿಪಿ-1 ಚೆಕ್ ನ್ನು ಫಿರ್ಯಾದಿಗೆ ಭದ್ರತೆಗಾಗಿ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ.

14. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿದಂತೆ ಫಿರ್ಯಾದಿ ಮತ್ತು ನನ್ನ ಗಂಡನ ನಡುವೆ ಆದ ಚೀಟಿ ವ್ಯವಹಾರಕ್ಕೆ ಸಂಬಂಧಿಸಿದಂತೆ ನನಗೆ ಯಾವುದೇ ಮಾಹಿತಿ ಇಲ್ಲ.

15. ಫಿರ್ಯಾದಿ ನನ್ನ ಗಂಡನ ಮೂಲಕ ನಿಪಿ-1 ಚೆಕ್ ನ್ನು ಪಡೆದು ದುರುಪಯೋಗಪಡಿಸಿಕೊಂಡಿರುವ ಬಗ್ಗೆ ಯಾವುದೇ ಪೋಲೀಸ್ ಠಾಣೆಯಲ್ಲಿ ಯಾವುದೇ ದೂರನ್ನು ನೀಡಿರುವುದಿಲ್ಲ.

16. ನಿಪಿ-1 ಚೆಕ್ ನ್ನು ಫಿರ್ಯಾದಿ ದುರುಪಯೋಗಪಡಿಸಿಕೊಂಡಿರುವ ಸಂಬಂಧ ನನ್ನ ಗಂಡನ ಮೂಲಕ ಯಾವುದೇ ನೋಟಿಸನ್ನು ಫಿರ್ಯಾದಿಗೆ ನೀಡಿಲ್ಲ.

17. ಫಿರ್ಯಾದಿ ನನಗೆ ಸುಮಾರು ವರ್ಷಗಳಿಂದ ಗೊತ್ತು ಎಂದರೆ ಸರಿ. ಫಿರ್ಯಾದಿ ನನಗೆ ಸುಮಾರು ವರ್ಷಗಳಿಂದ ಪರಿಚಯ ಇದ್ದುದರಿಂದ ದಿಃ 06.05.2020 ರಂದು ಫಿರ್ಯಾದಿ ಯಿಂದ 3 ಲಕ್ಷ ಹಣವನ್ನು ಸಾಲವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸದರಿ 3 ಲಕ್ಷ ಹಣವನ್ನು 2 ತಿಂಗಳ ನಂತರ ಮರುಪಾವತಿ ಮಾಡುವುದಾಗಿ ಫಿರ್ಯಾದಿಗೆ ತಿಳಿಸಿ ಸದರಿ 3 ಲಕ್ಷ ಹಣವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ.

18. ಫಿರ್ಯಾದಿ 2 ತಿಂಗಳ ನಂತರ ಸದರಿ 3 ಲಕ್ಷ ಹಣವನ್ನು ಮರುಪಾವತಿ ಮಾಡುವಂತೆ ಕೇಳಿದಾಗ ನಾನು ಸದರಿ 3 ಲಕ್ಷ ಹಣದ ಮರುಪಾತಿಗಾಗಿ ನಿಪಿ-1 ರಂತೆ ಚೆಕ್ ನ್ನು ಫಿರ್ಯಾದಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

19. ಸದರಿ ನಿಪಿ-1 ಚೆಕ್ ನ್ನು ಫಿರ್ಯಾದಿ ನನ್ನ ಬ್ಯಾಂಕಿನ ಮೂಲಕ ನಗದೀಕರಣಕ್ಕೆ ಹಾಜರುಪಡಿಸಿದಾಗ ಸದರಿ ನಿಪಿ-1 ಚೆಕ್ ಅಮಾನ್ಯಗೊಂಡಿರುತ್ತದೆ ಎಂದರೆ ಸರಿಯಲ್ಲ.

20. ಸದರಿ ನಿಪಿ-1 ಚೆಕ್ ಅಮಾನ್ಯಗೊಂಡ ನಂತರ ಫಿರ್ಯಾದಿ ಆ ಬಗ್ಗೆ ನಿಮಗೆ ತಿಳಿಸಿದಾಗ ನಾನು ಫಿರ್ಯಾದಿಯೊಂದಿಗೆ ಜಗಳ ಮಾಡಿರುತ್ತೇನೆ ಎಂದರೆ ಸರಿಯಲ್ಲ.

21. ದಿಃ 05.09.2020 ರಂದು ಸದರಿ ನಿಪಿ-1 ಚೆಕ್ ಅಮಾನ್ಯಗೊಂಡ ಬಗ್ಗೆ ಪೋಲಿಸರು ನನಗೆ ನೋಟಿಸು ನೀಡಿರುತ್ತಾರೆ.

22. ನಾನು ಫಿರ್ಯಾದಿಯಿಂದ ಪಡೆದ 3 ಲಕ್ಷ ಹಣವನ್ನು ಮರುಪಾವತಿ ಮಾಡುವ ಭದ್ಯತೆ ಇದ್ದದರಿಂದ ನಾನು ಫಿರ್ಯಾದಿಯ ವಿರುದ್ದ ಯಾವುದೇ ಕಾನೂನು ಕ್ರಮವನ್ನು ಕೈಗೊಂಡಿರುವುದಿಲ್ಲ ಎಂದರೆ ಸರಿಯಲ್ಲ.

23. ನಿಪಿ-3 ನೋಟಿಸನ್ನು ನಾನು ಉದ್ದೇಶ ಪೂರ್ವಕವಾಗಿ ತಿರಿಸ್ಕರಿಸಿರುತ್ತೇನೆ ಎಂದರೆ ಸರಿಯಲ್ಲ.

24. ಈ ಪ್ರಕರಣದಲ್ಲಿ ಸಲ್ಲಿಸಿದ ಫಿರ್ಯಾದಿಯಲ್ಲಿ ತೋರಿಸಿರುವ ವಿಳಾಸದಲ್ಲಿ ನಾನು ವಾಸವಾಗಿದ್ದಾಗ ಪೋಲಿಸರ ಮೂಲಕ ಹ್ಯಾಂಡ್ ಸಮಸ್ಸ್ ಪಡೆದು ಬಂದಾಗ ಸದರಿ ಹ್ಯಾಂಡ್ ಸಮಸ್ಸ್ ಜಾರಿಯಾಗಿರುತ್ತದೆ ಎಂದರೆ ಸರಿ.

25. ಫಿರ್ಯಾದಿಯಿಂದ ನಾನು 3 ಲಕ್ಷ ಹಣವನ್ನು ಪಡೆದು ಸದರಿ 3 ಲಕ್ಷ ಹಣವನ್ನು ಮರುಪಾವತಿ ಮಾಡಬೇಕಾಗುತ್ತದೆ ಎಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಸಾ.ಓ.ಹೇ.ಸ.ಒ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ., ಶ್ರೀರಂಗಪಟ್ಟಣ.**